ಕಲಾವಿದೆ ಎಂಬ ಹೆಮ್ಮೆ ಇದೆ. 'ಪ್ರಮೀಳಾ ರಾಜ್ಯ', 'ಮಣಿಪುರ', 'ನಾರದ ವಿನೋದ', 'ಹಸಿರು ಬಳೆ', ಮುಂತಾದ ನಾಟಕಗಳು ಪ್ರದರ್ಶನಗೊಂಡವು. ಸರ್ವ ಶಿಕ್ಷಣ ಅಭಿಯಾನದಲ್ಲಿ ಶಿಕ್ಷಣ ಇಲಾಖೆಯಿಂದ ಬಳ್ಳಾರಿ ಜಿಲ್ಲೆಯಾದ್ಯಂತ ಮಹಿಳಾ ಸಾಕ್ಷರತೆ ಬಗ್ಗೆ ಬೀದಿ ನಾಟಕಗಳನ್ನು ಪ್ರದರ್ಶಿಸಿದೆವು. ಧಾರವಾಡ ಜಿಲ್ಲೆಯಲ್ಲಿಯೂ ವಾರ್ತಾ ಮತ್ತು ಪ್ರಸಾರ ಇಲಾಖೆಯಿಂದಲೂ ಒಂದು ವಾರ ಪ್ರದರ್ಶನ ಮಾಡಿದೆವು.

10 ವರ್ಷದ ಬಾಲಕನಾಗಿದ್ದಾಗ ನಮ್ಮ ರಂಗ ತರಬೇತಿ ಶಿಬಿರದಲ್ಲಿ ಭಾಗವಹಿಸಿದ ನಮ್ಮೂರಿನ ವಿದ್ಯಾರ್ಥಿ ರಾಜೇಶ, ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಓದುತ್ತಿದ್ದಾರೆ. ಈಗ ಈಗವರು ಪ್ರಬುದ್ಧ ನಟ. ಚಲನಚಿತ್ರಗಳಲ್ಲಿಯೂ ನಟಿಸುವ ಕಲಾವಿದ.

**◆ ವಯಸ್ಸಾದ ಸಂದರ್ಭದಲ್ಲಿ ಕೆಲವು ರಂಗ ಕಲಾವಿದರ ಬದುಕು ದುಸ್ತರವಾದುದನ್ನು ಕಂಡಿರುವೆ. ಪಾತ್ರಗಳು ಲಭಿಸುವುದಿಲ್ಲ. ಸರ್ಕಾರ ಕೊಡುವ ಪಿಂಚಣಿಯಲ್ಲಿ ಜೀವನ ನಡೆಸುವ ಅನಿವಾರ್ಯತೆಯೂ ಇರುತ್ತದೆ. ನೀವು ಅಸಹಾಯಕ ಸ್ಥಿತಿಯಲ್ಲಿರುವ ಕಲಾವಿದರ ಸಹಾಯಕ್ಕಾಗಿ ಏನನ್ನಾದರೂ ಮಾಡಿದ್ದೀರಾ?**

ನಟನೆಯಲ್ಲಿರುವ ಕಲಾವಿದರಿಗೆ ವಯಸ್ಸಾದಂತೆ ಬೇಡಿಕೆ ಕಡಿಮೆಯಾಗುತ್ತದೆ. ಸಂಘಟನೆಯಲ್ಲಿ ತೊಡಗಿಕೊಂಡ ಮೇಲೆ, ಕೆಲವೊಮ್ಮೆ ನನ್ನ ಪಾತ್ರಗಳನ್ನೇ ಅವರಿಗೆ ಬಿಟ್ಟು ಕೊಟ್ಟಿದ್ದೇನೆ. ಅಶಕ್ತ ಕಲಾವಿದರ ಸಹಾಯಾರ್ಥ ಪ್ರದರ್ಶನಗಳನ್ನು ಸಂಘಟಿಸಿದ್ದೇನೆ. ಅವರ ಮಕ್ಕಳ ವಿದ್ಯಾಭ್ಯಾಸ, ಸ್ವಂತಕ್ಕೊಂದು ಮನೆ, ಮದುವೆ, ಅನಾರೋಗ್ಯ ಮುಂತಾದ ಕಾರಣಕ್ಕೆ ನೆರವು ಕೊಡಿಸಿದ್ದೇನೆ. ನಾನು ಗ್ರಾಮ ಪಂಚಾಯಿತಿ ಸದಸ್ಯೆಯೂ ಆಗಿದ್ದೆ. ಹೊಸಪೇಟೆ ತಾಲ್ಲೂಕು ಪಂಚಾಯಿತಿ ಸದಸ್ಯೆಯಾಗಿ ಆಯ್ಕೆಯಾಗಿ ಉಪಾಧ್ಯಕ್ಷೆಯಾಗಿದ್ದೆ. ಆಗ ಎಂ.ಪಿ. ಪ್ರಕಾಶ ಅವರು ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳಾಗಿದ್ದ ಸಂದರ್ಭ. ನೆರವು ನೀಡಲು ನನಗೆ ಅವಕಾಶಗಳಿದ್ದವು. ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗಳಿಂದ ಕಲಾವಿದರಿಗೆ ಮನೆ ಕಟ್ಟಿಕೊಳ್ಳಲು, ಉಚಿತ ವಿದ್ಯುತ್, ರೇಷನ್ ಕಾರ್ಡ್, ಕಡಿಮೆ ಬಡ್ಡಿಯಲ್ಲಿ ಸಾಲ, ಮಾಸಾಶನ ಮುಂತಾದ ವಿಷಯಗಳಲ್ಲಿ ನನ್ನ ಕೈಲಾದ ಮಟ್ಟಿಗೆ ಸಹಾಯ ಮಾಡಿದ್ದೇನೆ. ಸರ್ಕಾರದ ನೆರವು ಕೊಡಿಸಿದ್ದೇನೆ. ನಾಟಕ ಅಕಾಡೆಮಿ ಸದಸ್ಯೆಯಾಗಿದ್ದಾಗ ಕಷ್ಟದಲ್ಲಿರುವ ಕಲಾವಿದರಿಗೆ, ಮಹಿಳಾ ವೃತ್ತಿ ರಂಗ



ಕಲಾವಿದರ ಸಂಘದಿಂದ ನಾಟಕಗಳನ್ನು ಪ್ರಾಯೋಜಿಸಿ ಅವರಿಗೆ ಹೆಚ್ಚು ಸಂಭಾವನೆ ಸಿಗುವ ಹಾಗೆ ಶ್ರಮಿಸಿದ್ದೇನೆ. ಕಾಯಿಲೆಯಿಂದ ನರಳುವ ಕಲಾವಿದರನ್ನು ನಾನೇ ಖುದ್ದಾಗಿ ಆಸ್ಪತ್ರೆಗೆ ಕೊಂಡೊಯ್ದು ಉಪಚರಿಸಿದ್ದೇನೆ. ಸಮಾಜದ ದಾನಿಗಳಿಂದಲೂ ನೆರವು ಕೊಡಿಸಿದ್ದುಂಟು.

**◆ ಕಲಾವಿದೆಯಾಗಿ ನೀವು ಇಡೀ ರಾಜ್ಯದಲ್ಲಿ ಗುರುತಿಸಿಕೊಂಡಿದ್ದೀರಿ. ಬೆಂಗಳೂರಿನಲ್ಲೂ ಮಕ್ಕಳಿಗಾಗಿ ಬೇಸಿಗೆ ಶಿಬಿರದಲ್ಲಿ ನಾಟಕ ತರಬೇತಿ ನೀಡಿದ್ದೀರಿ. ಅಲ್ಲಿನ ಬಡಾವಣೆ**